೨) ಎಲ್ಲ ಬೀಡಿ ಕಾರ್ಮಿಕರಿಗೆ ಈಗ ಇರುವ ಕನಿಷ್ಠ ವೇತನವನ್ನು ಪರಿಷ್ಕರಿಸಲು ಕರಡು ಅಧಿಸೂಚನೆಯೊಂದನ್ನು ಹೊರಡಿಸುವ ವಿಚಾರವು ಪರಿಶೀಲನೆಯಲ್ಲಿದೆ.

೩) ಬೀಡಿ ಗುತ್ತಿಗೆದಾರರು ಕಾರ್ಮಿಕರ ಸಂಘಕ್ಕೆ ಸೇರುವುದಿಲ್ಲ. ಆದುದರಿಂದ ಅವರಿಗೆ ಕಾರ್ಮಿಕರಿಗೆ ಕೊಡುವ ಸವಲತ್ತುಗಳನ್ನು ದೊರಕಿಸಿಕೊಡಲು ಬರುವುದಿಲ್ಲ. ಹಾಗೂ ಬೀಡಿ ಉದ್ದಿಮೆಯಲ್ಲಿ ಜಾರಿಯಲ್ಲಿರುವ ಗುತ್ತಿಗೆ ಪದ್ಧತಿಯನ್ನು ಸರ್ಕಾರ ಇಷ್ಟರಲ್ಲೇ ನಿಷೇಧಿಸಲು ಕ್ರಮ ತೆಗೆದುಕೊಳ್ಳುತ್ತಿದೆ.

೪) ಈ ಯೋಜನೆಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಕಲ್ಯಾಣ ಆಯುಕ್ತರಲ್ಲಿ ಲಭ್ಯವಿರುವ ಮಾಹಿತಿಯಂತೆ ಸದರಿ ಯೋಜನೆಯಡಿಯಲ್ಲಿ ಗರ್ಗೇಶ್ವರಿ, ಗುಂಡ್ಲುಪೇಟೆ, ಬೆಳಗಾಂ, ಬಳ್ಳಾರಿ, ಮಂಗಳೂರು, ಜಮಖಂಡಿ, ದಾವಣಗೆರೆ ಮತ್ತು ಮೈಸೂರಿನಲ್ಲಿ ಮನೆಕಟ್ಟುವ ಯೋಜನೆ ಇರುತ್ತದೆ: ಮೈಸೂರು ಜಿಲ್ಲೆಯ ಚಾಮುಂಡಿ ನಗರದಲ್ಲಿ ೪೨೫ ಮನೆಗಳನ್ನು ಕಟ್ಟಲಾಗಿದೆ.

ಬೇಲೂರು ಚನ್ನಕೇಶವ ದೇವಸ್ಥಾನದ ಸಂಸ್ಥೆಗೆ ಮಂಜೂರಾತಿ ನೀಡಿದ ಹಣ.

೧೪೫೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಧಾರ್ಮಿಕ ಹಾಗೂ ದತ್ತಿ ಮಂತ್ರಿ ನಿಯಂತ್ರಿತ ಮಾರುಕಟ್ಟೆ ಹಾಗೂ ಖಿಸ್ಕಿ ಜವಿಾನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೇಲೂರು ಚನ್ನಕೇಶವ ದೇವಸ್ಥಾನದ ವಾರ್ಷಿಕ ಆದಾಯವೆಷ್ಟು ? ಹಾಗೂ ಸದರಿ ದೇವಸ್ಥಾನಕ್ಕೆ ಸರ್ಕಾರದವರು ನೀಡುತ್ತಿರುವ ಅನುದಾನ ವೆಷ್ಟು ?

ಆ) ಕಳೆದ ಮೂರು ವರ್ಷಗಳಿಂದ ಆದಾಯದ ಹಾಗೂ ಖರ್ಚಿನ ವಿವರ ಒದಗಿಸುವುದು ?

ಇ) ಸದರಿ ದೇವಸ್ಥಾನದ ಕಟ್ಟಡಗಳು ಶಿಥಿಲಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ದುರಸ್ತಿ ಕಾರ್ಯದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ಹಾಗೂ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಅಮರನಾಥಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ಖಿಸ್ಕಿ ಜವಿಾನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—

ಅ) ವಾರ್ಷಿಕ ಆದಾಯ ರೂ. ೧,೨೪,೬೯–೦೦ ಇರುತ್ತದೆ. ಹಿಂದಿನ ೩ ವರ್ಷಗಳಲ್ಲಿ ಸರ್ಕಾರದಿಂದ ಯಾವುದೇ ಅನುದಾನವನ್ನು ಕೊಟ್ಟಿರುವುದಿಲ್ಲ.

ಆ) ವರ್ಷ	ಆದಾಯ	ಖರ್ಚು
೧೯೮೫–೮೬	೧,೧೫,೨೦೮–೦೦	೧ ೦೪,೧೪೧–೦೦
೧೯೮೬–೮೭	೧,೧೨,೧೯೫–೦೦	೧,೦೪,೧೪೧–೦೦
೧೯೮೭–೮೮	೧ ೩೫,೪೯೫–೦೦	೧,೦೪,೧೪೧–೦೦

ಇ) ದೇವಸ್ಥಾನದ ಕಟ್ಟಡವು ಉತ್ತಮ ಸ್ಥಿತಿಯಲ್ಲಿದೆ ಆದರೆ ಅಲ್ಲಿ ಸಣ್ಣ ಪುಟ್ಟ ದುರಸ್ತಿ ಕಾರ್ಯ ಮಾಡಬೇಕಾಗಿದೆ.

ಈ) ಈ ಕಟ್ಟಡ ಪ್ರಾಚ್ಯ ವಸ್ತು ಇಲಾಖೆಯ ಅಡಳಿತಕ್ಕೊಳಪಟ್ಟಿದೆ. ಕಟ್ಟಡದ ದುರಸ್ತಿಗಾಗಿ ಬೇಲೂರು ತಹಶೀಲ್ದಾರರು ಪ್ರಾಚ್ಯವಸ್ತು ಇಲಾಖೆಯವರನ್ನು ಪತ್ರ ಬರೆದು ಕೋರಿರುತ್ತಾರೆ.